# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ , ಕಾರವಾರ

ಸಿ.ಸಿ. ನಂಃ 28/2021 ಪಿ.ಡಬ್ಲ್ಯೂಃ 3

ಸಿಡಬ್ಲೂಃ 3

ಸಾಕ್ಷಿದಾರರ ಹೆಸರು : ಕೆ ರಾಮಚಂದ್ರ

ತಂದೆಯ ಹೆಸರು : ಜಿ ಕೃಷ್ಣಮೂರ್ತಿ

ವಯಸ್ಸು : 59 ವರ್ಷ

ಉದ್ಯೋಗ : ಅಬಕಾರಿ ಉಪ ನಿರೀಕ್ಷಕರು, ವರ್ತೂರು ವಲಯ,

ವಾಸ್ತವ್ಯ : ಬೆಂಗಳೂರು.

ಬೆಂಗಳೂರು

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 03-10-2023

## ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ

ನಾನು 05.11.2019 ರಿಂದ 03.02.2021 ರ ವರೆಗೆ ಅಬಕಾರಿ ಪೇದೆಯಾಗಿ ಜಿಲ್ಲಾ ತಂಡ ಕಾರವಾರದಲ್ಲಿ ಕೆಲಸ ನಿರ್ವಹಿಸಿದ್ದೇನೆ.

2. ನಾನು ದಿನಾಂಕಃ 06.01.2020 ರಂದು ಚಾಸಾ.1, ನಾನು , ಚಾಸಾ.2 ಮತ್ತು ಇತರ ಜಿಲ್ಲಾ ತಂಡದ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿರುವಾಗ ಚಾಸಾ.1 ರವರಿಗೆ ಅಕ್ರಮ ಮದ್ಯ ಸಾಗಾಟವಾಗುತ್ತಿರುವ ಬಗ್ಗೆ ಖಚಿತ ಬಾತ್ಮಿ ಬಂದಿರುತ್ತದೆ. ನಾವು ಸದಾಶಿವಗಡದಲ್ಲಿ ರಾಷ್ಟ್ರೀಯ ಹೆದ್ದಾರಿ 66 ರಲ್ಲಿ ಗಸ್ತು ಮಾಡುತ್ತಿದ್ದಾಗ ರಾತ್ರಿ ಸುಮಾರು 9-00 ಗಂಟೆಗೆ ಒಬ್ಬ ವ್ಯಕ್ತಿ ಅನುಮಾನಾಸ್ಪದವಾಗಿ ನಮಗೆ ಕಂಡು ಬಂದಿದ್ದು , ನಾವು ಅವರನ್ನು ಸುತ್ತುವರಿದು ತಡೆದಿರುತ್ತೇವೆ. ಸದರಿ ವಾಹನ ಸಂಖ್ಯೆ ಜಿಎ-08 ಇ -2750 ಸುಜುಕಿ ಕಂಪನಿಯ ಜೆನ್ LXI ಆಗಿರುತ್ತದೆ. ಅಕ್ಕಪಕ್ಕದಲ್ಲಿರುವ ಜನರನ್ನು ಪಂಚರಾಗಿ ಸಹಕರಿಸಲು ಕೋರಿದ್ದು , ಅವರು ನಿರಾಕರಿಸಿರುತ್ತಾರೆ. ಆದ ಕಾರಣ ಚಾಸಾ.1 ರವರು ನನಗೆ ಮತ್ತು ಚಾಸಾ.2 ರವರಿಗೆ ಪಂಚರಾಗಿ ಸಹಕರಿಸಲು ಕೋರಿದಾಗ ನಾವು ಒಪ್ಪಿಕೊಂಡೆವು. ಮಾನ್ಯ ನ್ಯಾಯಾಲಯದಿಂದ ಶೋಧನಾ ವಾರಂಟ ಪಡೆಯಲು ಸಮಾಯಾವಕಾಶ ಇಲ್ಲದಿರುವ ಕಾರಣ ಚಾಸಾ.1 ರವರು ಕ.ಅ . ಕಾಯ್ದೆಯ ಕಲಂ 54 ರಡಿಯ ಶೋಧನಾ ಸಮ್ಮುಚಿತ ಆಧಾರ ವರದಿಯನ್ನು ತಯಾರಿಸಿದರು.

3. ನಂತರ ವಾಹನವನ್ನು ಪರಿಶೀಲಿಸಲಾಗಿ ವಾಹನದ ಹಿಂದಿನ ಸೀಟಿನ ಕೆಳಭಾಗದಲ್ಲಿ ಗೋವಾ ರಾಜ್ಯದಲ್ಲಿ ತಯಾರಿಸಿದ್ದ ಮತ್ತು ಗೋವಾ ರಾಜ್ಯದಲ್ಲಿ ಮಾರಾಟಕ್ಕೆ ಮನ್ನಣೆ ಪಡೆದ 750 ಎಂಎಲ್ ನ ಮ್ಯಾಕಡೊಲ ನಂ 1 ವಿಸ್ಕಿ 14 ಬಾಟಲಿಗಳು ಇರುವುದು ಕಂಡು ಬಂದಿತು .

4. ನಂತರ ರಸಾಯನಿಕ ಪರೀಕ್ಷೆಗಾಗಿ 750 ಎಂಎಲ್ ನ ಮ್ಯಾಕಡೊಲ ನಂ 1 ವಿಸ್ಕಿ 4 ಬಾಟಲಿಗಳನ್ನು ತೆಗೆದುಕೊಂಡಿದ್ದು ಅವುಗಳಿಗೆ ಬಟ್ಟೆಯನ್ನು ಸುತ್ತು ದಾರದಿಂದ ಸುತ್ತಿ ಅರಗಳನ್ನು ಹಾಕಿ ಇಲಾಖಾ ಶೀಲ್ ದಿಂದ ಸೀಲ್ ಮಾಡಲಾಯಿತು . ನಂತರ ಸಣ್ಣ ಸಣ್ಣ ಮಾದರಿ ಚೀಟಿಗಳನ್ನು ತಯಾರಿಸಿ ಅವುಗಳಿಗೆ ಚಾಸಾ.1,3 ಮತ್ತು ನನ್ನ ಸಹಿ ಇರುವ ಚೀಟಿಯನ್ನು ಸದ್ರಿ ಬಾಟಲುಗಳಿಗೆ ಅಂಟಿಸಲಾಯಿತು . ಆರೋಪಿಯ ಹೆಸರು ಕೇಳಲಾಗಿ ತನ್ನ ಹೆಸರು ಶ್ರೀಪಾದ ಕಾಶಿನಾಥ ಕೊಳಂಬಕರ ಎಂದು ತಿಳಿಸಿದರು. ಪಂಚನಾಮೆಯನ್ನು ರಾತ್ರಿ ಸುಮಾರು 9-00 ರಿಂದ 10-15 ರವರೆಗೆ ಬರೆದು ಮುಗಿಸಲಾಯಿತು. ನಂತರ ಚಾಸಾ.1 ರವರು ದಸ್ತಗಿರಿ ಮಾಡಿದ ಅರೋಪಿಯನ್ನು , ಜಪ್ತು ಮಾಡಿದ ಮದ್ಯವನ್ನು ಮತ್ತು ವಾಹನದೊಂದಿಗೆ ಠಾಣೆಗೆ ಬಂದು ಸರಕಾರದ ಪರವಾಗಿ ದೂರನ್ನು ದಾಖಲಿಸಿರುತ್ತಾರೆ. ನನ್ನ ಹೇಳಿಕೆಯನ್ನು ಚಾಸಾ.7 ರವರಿಗೆ ನೀಡಿರುತ್ತೇನೆ. ಆರೋಪಿಯನ್ನು ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ನಿಪಿ.1 ನ್ನು ನೋಡಿ ಗುರುತಿಸುತ್ತೇನೆ. ಅದರಲ್ಲಿರುವ ನನ್ನ ಸಹಿಯನ್ನು ನಿಪಿ.1 ಸಿ ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ನಿಪಿ.6 ನ್ನು ನೋಡಿ ಗುರುತಿಸುತ್ತೇನೆ. ಅದರಲ್ಲಿರುವ ನನ್ನ ಸಹಿಯನ್ನು ನಿಪಿ.6 ಬಿ ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಮು ಮಾ ಗಳನ್ನು ನೋಡಿ ಗುರುತಿಸುತ್ತೇನೆ. ಅವುಗಳ ಮೇಲಿರುವ ನನ್ನ ಸಹಿಯನ್ನು ಮು ಮಾ 1.ಸಿ ರಿಂದ 4 ಸಿ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಸಿ ಡಿ ಎನ್ ಆರೋಪಿ ಪರ ವಕೀಲರಿಂದ**

**5.** ಈ ಪ್ರಕರಣದಲ್ಲಿ ನಾನು ಪಂಚನಾಗಿ ಸಾಕ್ಷಿ ನುಡಿಯಲು ಬಂದಿದ್ದೇನೆ. ಸದರಿ ದಿನದಂದು ನಾನು ಕರ್ತವ್ಯದಲ್ಲಿ ಇದ್ದೆ ಎಂದು ಹೇಳಲು ತನಿಖಾಧಿಕಾರಿಯವರಿಗೆ ಹಾಜರಾತಿ ದಾಖಲೆಯನ್ನು ನೀಡಿರುತ್ತೇನೆ. ಸಾಕ್ಷಿಗೆ ಒಂದು ಮು ಮಾ ನ್ನು ತೋರಿಸಲಾಗಿ ಅದರ ಮೇಲೆ for sale only in Goa ಎಂದು ಬರೆದಿರುವುದು ಕಾಣುವುದಿಲ್ಲಾ ಎಂದರೆ ಸರಿ, ಸಾಕ್ಷಿ ಮುಂದುವರಿದು ಚೀಟಿ ಅಂಟಿಸಲಾಗಿದೆ ಎಂದು ನುಡಿಯುತ್ತಾರೆ. ಸದರಿ ಚೀಟಿಯನ್ನು ಉದ್ದೇಶಪೂರ್ವಕವಾಗಿ ಮಾಹಿತಿಯನ್ನು ಮುಚ್ಚಿ ಅಂಟಿಸಲಾಗಿದೆ ಎಂದರೆ ಸರಿಯಲ್ಲ.

6. ಚಾಸಾ.1 ರವರಿಗೆ ಮಾಹಿತಿ ಬಂದ ಸಮಯದಲ್ಲಿ ನಾವು ಟೋಲನಾಕಾದಲ್ಲಿ ಇದ್ದೆವು. ಟೋಲನಾಕಾ ರಾ.ಹೆ.ಯಲ್ಲಿ ಸಾಕಷ್ಟು ವಾಹನ ಸಂಚಾರ ಇರುತ್ತದೆ ಎಂದರೆ ಸರಿ. ರಾ.ಹೆ. ಸಾಮಾನ್ಯವಾಗಿ

ವಾಹನಗಳು ವೇಗವಾಗಿ ಓಡಾಡುತ್ತಿರುತ್ತವೆ ಎಂದರೆ ಸರಿ. ಘಟನೆ ನಡೆದ ಸಮಯದಲ್ಲಿ ನೀವು ಬ್ಯಾರಿಕೇಡ್ ಹಾಕಿ ವಾಹನವನ್ನು ತಪಾಸಣೆ ಮಾಡಿದ್ದೀರಾ ಎಂದು ಕೇಳಲು ಸಾಕ್ಷಿಯು ಬ್ಯಾರಿಕೇಡ್ ಹಾಕಿರಲಿಲ್ಲ ನಾವು ಹಾಗೇಯೇ ತಪಾಸಣೆ ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ. ಜನಸಾಮಾನ್ಯರಿಗೆ ಚಾಸಾ.1 ರವರು ಪಂಚರಾಗುವಂತೆ ಕೋರಿರುತ್ತಾರೆ ಎಂದರೆ ಸರಿ. ಜನರು ಪಂಚರಾಗಲು ಒಪ್ಪಲಿಲ್ಲಾ ಎನ್ನುವ ವಿಚಾರವನ್ನು ಪಂಚನಾಮೆಯಲ್ಲಿ ಬರೆದಿರುವುದಿಲ್ಲಾ ಎಂದರೆ ಸರಿಯಲ್ಲ. ಜನರು ತಮ್ಮ ಹೆಸರು ಮತ್ತು ವಿಳಾಸ ಹೇಳಲು ನಿರಾಕರಿಸಿದರು. ಚಾಸಾ.1 ರವರು ಪಂಚರಾಗುವಂತೆ ನನಗೆ ನೋಟೀಸ ನೀಡಿರುವುದಿಲ್ಲಾ ಎಂದರೆ ಸರಿ.

7. ಸದರಿ ದಿನದಂದು ನಮ್ಮ ಅಂಗಶೋಧನೆ ಪಂಚನಾಮೆ ಮಾಡಿರುವುದಿಲ್ಲಾ ಎಂದರೆ ಸರಿ. ಸದ್ರಿ ಮು.ಮಾಲುಗಳ ಮೇಲಿದ್ದ ತಯಾರಿಸಿದ ದಿನಾಂಕ , ಬ್ಯಾಚ್ ನಂಬರ ಮತ್ತು ಇತರ ಮಾಹಿತಿಯನ್ನು ಬರೆದಿರುವುದಿಲ್ಲ ಎಂದರೆ ಸರಿ. ಈ ಪ್ರಕರಣದಲ್ಲಿ ಜಪ್ತುಪಡಿಸಿಕೊಂಡ ಮು ಮಾ ಗಳ ಮೇಲೆ ಲೇಬಲ ಇರಲಿಲ್ಲಾ . ನ್ಯಾಯಾಲಯದ ಮುಂದೆ ಇರುವ ಮು ಮಾ ಗಳನ್ನು ಸಾಕ್ಷಿಗೆ ತೋರಿಸಲಾಗಿ ಅವುಗಳ ಮೇಲೆ ತಯಾರಿಸಿದ ದಿನಾಂಕ , ಬ್ಯಾಚ ನಂಬರ ಮತ್ತು ಇತರೇ ಮಾಹಿತಿ ಇದೆ ಎಂದರೆ ಸರಿ. ನಾವು ಜಪ್ತು ಪಡಿಸಿಕೊಂಡ ಮು ಮಾಗಳು ಮತ್ತು ಇಂದು ನ್ಯಾಯಾಲಯದ ಮುಂದೆ ಇರುವ ಮು ಮಾ ಗಳು ಬೇರೆ ಬೇರೆ ಎಂದರೆ ಸರಿಯಲ್ಲ. ಸದರಿ ಮು ಮಾ ಗಳು ಆರೋಪಿಯ ವಾಹನದಲ್ಲಿ ಇರಲಿಲ್ಲ, ಅವರ ವಾಹನವನ್ನು ಠಾಣೆಗೆ ತರಿಸಿಕೊಂಡು ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ದಿನದಂದು ಆರೋಪಿ ಟೋಲನಾಕಾ ಬಳಿ ಹೋಗಿರಲಿಲ್ಲಾ ಮತ್ತು ಅವನ ವಾಹನ ಸಹ ಇರಲಿಲ್ಲಾ ಎಂದರೆ ಸರಿಯಲ್ಲ. ಜನರಿಗೆ ನಾವು ಪಂಚರಾಗುವಂತೆ ಕೋರಿರುವುದಿಲ್ಲಾ ಮತ್ತು ಸದರಿಯವರು ಅದಕ್ಕೆ ನಿರಾಕರಿಸಿರುವುದಿಲ್ಲಾ ಎಂದರೆ ಸರಿಯಲ್ಲ. ನಾನು ಚಾಸಾ.7 ರವರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲಾ ಎಂದರೆ ಸರಿಯಲ್ಲ.

8. ಸದ್ರಿ ದಿನದಂದು ನಾವು ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ , ಪಂಚನಾಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ . ಮು.ಮಾಲುಳಿಗೆ ಮತ್ತು ಆರೋಪಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ . ನಾನು ಮು.ಮಾಲುಗಳನ್ನು ರಸಾಯನಿಕ ಪರೀಕ್ಷೆಗೆ ತೆಗೆದುಕೊಂಡು ಹೋಗಿರುವುದಿಲ್ಲಾ ಎಂದರೆ ಸರಿಯಲ್ಲ . ಆರೋಪಿ ಮೇಲೆ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ .

**ಮರು ವಿಚಾರಣೆಃ – ಇಲ್ಲಾ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ.ಕೇ. ಸರಿ ಇದೆ.

**ಹೆ.ಪ್ರ ದ.ನ್ಯಾದಂ. ಕಾರವಾರ**